# ಮಣಿಮೇಖಲೆ

ತಮಿಳು ಸಾಹಿತ್ಯದ ಪರಂಪರೆಯಲ್ಲಿ ‘ಶಿಲಪ್ಪದಿಗಾರಂ’ ಮತ್ತು ‘ಮಣಿಮೇಖಲೆ’ ಕಾವ್ಯಗಳಲ್ಲಿ ಮುಖ್ಯವಾದವು. ಇವರೆಡನ್ನೂ ಅವಳಿ ಕಾವ್ಯಗಳೆಂದು ಕರೆಯುತ್ತಾರೆ. ‘ಶಿಲಪ್ಪದಿಗಾರಂ’ ಕಾವ್ಯವನ್ನು ಬರೆದವನು ಅರಸನ ಮಗನಾಗಿದ್ದು ಎಲ್ಲವನ್ನೂ ತ್ಯಜಿಸಿ ಹೊರಬಂದ ಇಳಂಗೋ ಅಡಿಗಳ್. ‘ಮಣಿಮೇಖಲೆ’ ಕಾವ್ಯವನ್ನು ಬರೆದವನು ಶಾತ್ತನಾರ್ ಎಂಬ ವರ್ತಕ. ‘ಶಿಲಪ್ಪದಿಗಾರಂ’ ಕೋವಲನ್ ಮತ್ತು ಕಣ್ಣಗಿಯ ದುರಂತ ಕಾವ್ಯ. ‘ಮಣಿಮೇಖಲೆ’ ಕೋವಲನ್ ಮತ್ತು ಅವನ ಪ್ರೇಯಸಿಯಾಗಿದ್ದ ಮಾಧವಿಯ ಮಗಳು ಮಣಿಮೇಖಲೆಯನ್ನು ಕೇಂದ್ರವಾಗಿಟ್ಟುಕೊಂಡಿರುವ ಕಾವ್ಯ. ಕೋವಲನ್ ಸಾವಿನಿಂದ ಆಸರೆತಪ್ಪಿದ ಮಾಧವಿ ತನ್ನದೆಲ್ಲವನ್ನೂ ತ್ಯಜಿಸಿ ಮಗಳು ಮಣಿಮೇಖಲೆಯೊಂದಿಗೆ ಅರವಣ ಅಡಿಗಳ ಮೂಲಕ ಬೌದ್ಧ ಧರ್ಮವನ್ನು ಸ್ವೀಕರಿಸುತ್ತಾಳೆ. ಹೀಗಾಗಿ ಬೌದ್ಧದರ್ಶನದ ಮೂಲ ಸತ್ವವಾದ ಸರ್ವಜನರ ಹಿತದ ಲೋಕ ಕಾರುಣ್ಯ ‘ಮಣಿಮೇಖಲೆ’ ಕಾವ್ಯವನ್ನು ಸಮಗ್ರವಾಗಿ ಆವರಿಸಿಕೊಂಡಿದೆ.

ಚರಿತ್ರೆಯಲ್ಲಿ ಬೌದ್ಧದರ್ಶನವು ಗಡಿ ಮತ್ತು ಸಾಗರಗಳನ್ನು ದಾಟಿ ಯಾವ ಯಾವ ದೇಶಗಳಿಗೆ ಹೋಗಿದೆಯೋ, ಅಲ್ಲೆಲ್ಲಾ ಆ ಸಂಸ್ಕೃತಿಗೆ ಅನುಗುಣವಾಗಿ ರೂಪಾಂತರಗೊಂಡು ಆಳವಾಗಿ ಬೇರುಬಿಟ್ಟಿದೆ. ‘ಮಣಿಮೇಖಲೆ’ ಕಾವ್ಯದಲ್ಲೂ ಬೌದ್ಧ ದರ್ಶನವು ಸಂಗಮ್ ಕಾಲದ ತಮಿಳು ಸಂಸ್ಕೃತಿಯನ್ನು ಒಳಗೊಂಡು, ಆ ಮುಖೇನ ಮಣಿಮೇಖಲೆಯ ವ್ಯಕ್ತಿತ್ವ ಮತ್ತು ಅವಳ ಕ್ರಿಯಾದರ್ಶನದ ಮೂಲಕ ಪ್ರಕಾಶಿತವಾಗಿದೆ. ಈ ಕಾವ್ಯವು ಸಿಂಹಾಸನ, ಸಂಚು, ಹಿಂಸೆ, ರಕ್ತಪಾತಕ್ಕೆ ಸಂಬಂಧಪಟ್ಟಿಲ್ಲ! ಬದಲಿಗೆ ಹಸಿದವರ ಅನ್ನದೊಂದಿಗೆ ಬೆಸೆದುಕೊಂಡಿದೆ.

‘ಅನ್ನವೇ ಧರ್ಮ’ವೆಂದು ಹೇಳುವ ಅಪರೂಪದ ಕಾವ್ಯ ‘ಮಣಿಮೇಖಲೆ’. ಕಾವ್ಯದ ಕೇಂದ್ರ ಪಾತ್ರ ಮಣಿಮೇಖಲೆಯಾದರೂ, ವಾಸ್ತವದಲ್ಲಿ ಲೋಕಕಾರುಣ್ಯವೇ ಈ ಕಾವ್ಯದ ಮೂಲ ಸತ್ವ. ಬೌದ್ಧ ಧರ್ಮವೆಂದರೆ, ಅಂತಿಮವಾಗಿ ಹಸಿದವರಿಗೆ ಅನ್ನ ನೀಡುವುದು. ಅವರೊಂದಿಗೆ ಕರುಣಾಮೈತ್ರಿಯಿಂದ ಬಾಳುವುದು.

‘ಧರ್ಮವೆನ್ನುವುದು ಯಾವುದೆಂದು ಕೇಳಿದರೆ ಮರೆಯದೆ ಹೇಳಿ; ನೆರೆಹೊರೆಯ ಜೀವಿಗಳಿಗೆಲ್ಲಾ ಅನ್ನ, ಉಡುವ ವಸ್ತ್ರ, ವಾಸಿಸಲು ಮನೆಯಲ್ಲದೆ ಬೇರಿಲ್ಲ’ ಎಂದು ಹೇಳುತ್ತಲೇ, ಈ ಕಾವ್ಯ ನಾಡನ್ನಾಳುವ ರಾಜನ ಸೋಗಲಾಡಿತನಗಳನ್ನು ತಿರಸ್ಕರಿಸಿ, ಅರಸನಾದವನು ಪಾಲಿಸಬೇಕಾದ ಕರ್ತವ್ಯಗಳೇನು ಎಂಬುದನ್ನು ಸೂಕ್ಷ್ಮವಾಗಿ ಹೇಳುತ್ತದೆ. ಬೌದ್ಧ ಭಿಕ್ಷುಣಿಯಾದ ಮಣಿಮೇಖಲೆಗೆ ಮಣಿಪಲ್ಲವ ದ್ವೀಪದಲ್ಲಿ ದೇವತೆಗಳ ಅನುಗ್ರಹದಿಂದ ದೊರೆತ ‘ಅಮೃತ ಸುರಭಿ’ ಅಕ್ಷಯ ಪಾತ್ರೆಯಿಂದ ಬಡವರ ಹಸಿವನ್ನು ಹಿಂಗಿಸಲು ಬೀದಿಗೆ ಇಳಿದಳು. ಹೀಗೆ ಹಸಿದವರಿಗೆ ಅನ್ನವನ್ನು ನೀಡುತ್ತಿದ್ದ ಮಣಿಮೇಖಲೆಯನ್ನು ನೋಡಿದ ಅಲ್ಲಿನ ಯುವರಾಜ ಅವಳ ಮೇಲೆ ಮೋಹಗೊಂಡ. ಇದನ್ನು ತಿಳಿದ ಮಣಿಮೇಖಲೆ, ‘ಈ ಮಾಂಸದ ಮೇಲಿನ ವ್ಯಾಮೋಹವನ್ನು ಬಿಡು. ಹುಟ್ಟಿದ ಎಲ್ಲ ವಸ್ತುಗಳಿಗೂ ವಿನಾಶವಿದೆಯೆಂದು ತಿಳಿ. ಈ ಶರೀರ ಅನಿತ್ಯ, ಧರ್ಮ ಮಾತ್ರ ಶಾಶ್ವತ’ ಎಂದು ಆ ಯುವರಾಜನಿಗೆ ತಿಳಿಯ ಹೇಳಿ, ಅವನ ಕಣ್ಣುಗಳಿಂದ ಮರೆಯಾದಳು. ಆದರೂ ವಿವೇಕ ಮೂಡದ ಯುವರಾಜನ ಕಣ್ಣುಗಳು ಮಣಿಮೇಖಲೆಯ ಮೋಹದಿಂದ ಕುರುಡಾಗಿದ್ದವು. ಹೀಗಿರಲು ಒಂದು ದಿನ ಯುವರಾಜನು ಕೊಲೆಯಾದನು. ಆ ಕೊಲೆಯ ಆಪಾದನೆ ಮಣಿಮೇಖಲೆಯ ಮೇಲೆ ಬಂತು. ಅಲ್ಲಿನ ರಾಜ ಮತ್ತು ರಾಣಿ, ಕೊಲೆ ಆರೋಪದ ಮೇಲೆ ಮಣಿಮೇಖಲೆಯನ್ನು ಬಂಧಿಸಿ ಸೆರೆಮನೆಗೆ ತಳ್ಳಿದರು. ರಾಣಿಯು ಸೆರೆಮನೆಯಲ್ಲಿದ್ದ ಮಣಿಮೇಖಲೆಯನ್ನು ಕೊಲ್ಲಲು ಅನೇಕ ಸಲ ಪ್ರಯತ್ನಿಸಿದಳು. ಆದರೆ ಅವಳನ್ನು ಕೊಲ್ಲುವ ಸಂಚುಗಳು ವಿಫಲವಾದವು.

ಕೆಲ ದಿನಗಳ ನಂತರ ಯುವರಾಜನ ಕೊಲೆಗೆ ಮಣಿಮೇಖಲೆ ಕಾರಣವಲ್ಲ ಎಂದು ತಿಳಿದು, ಅವಳನ್ನು ಸೆರೆಮನೆಯಿಂದ ಬಿಡುಗಡೆಗೊಳಿಸಿದರು. ಮಣಿಮೇಖಲೆಯು ರಾಣಿಯನ್ನು ಉದ್ದೇಶಿಸಿ, ‘ಮಹಾರಾಣಿ, ದ್ವೇಷದಿಂದ ಯಾವ ಪರಿಣಾಮವೂ ಇಲ್ಲ. ಲೋಕವನ್ನು ಪ್ರೇಮದಿಂದ ಜಯಿಸಬೇಕು. ಮನುಷ್ಯರ ಹೃದಯವು ಸಕಲ ಜೀವಿಗಳ ಬಗ್ಗೆಯೂ ಕರುಣೆಯನ್ನು ತೋರಿಸಬೇಕು. ಕೇವಲ ಜ್ಞಾನವು ಏನೂ ಮಾಡಲಾರದು. ಕರುಣೆಯೋ, ಪ್ರೀತಿಯೋ ಎಲ್ಲಕ್ಕಿಂತ ಮಿಗಿಲೆಂದು ತಿಳಿ’ ಎಂದು ಹೇಳಿದಳು. ಮಣಿಮೇಖಲೆಯ ಈ ಕಾರುಣ್ಯ ‘ಸಾಗರಾಂತರ ಮೇಖಲ’. ಅವು ಪ್ರೀತಿ–ಪ್ರೇಮಗಳು ಮಡುಗಟ್ಟಿದ, ನಿಸ್ವಾರ್ಥದ ಹೃದಯದಿಂದ ಹರಿದುಬಂದಿದ್ದು. ಇದೇ ಬಗೆಯ ಕಾರುಣ್ಯದ ಗುಣಗಳಿದ್ದ 9ನೇ ಶತಮಾನದ ಸೂಫಿ ಹೆಣ್ಣು ರಬಿಯಾ ಅಲ್–ಬಸ್ರಿ, ‘ನೀನು ಸೈತಾನನ್ನು ದ್ವೇಷಿಸುತ್ತಿಯಾ?’ ಎಂದು ತನ್ನನ್ನು ಪ್ರಶ್ನಿಸಿದವರಿಗೆ ಹೀಗೆ ಹೇಳುತ್ತಾಳೆ – ‘ನನ್ನ ಹೃದಯದಲ್ಲಿ ಪ್ರೇಮ ಎಷ್ಟೊಂದು ತುಂಬಿ ತುಳುಕಾಡುತ್ತಿದೆಯೆಂದರೆ, ಅದರಲ್ಲಿ ಇತರರನ್ನು ದ್ವೇಷಿಸಲು ಎಡೆಯೇ ಇಲ್ಲ!’. ಮಣಿಮೇಕಲೆಯ ಹೃದಯವೂ ಕೂಡ ಯಾರಿಗೂ ಕೇಡು ಬಯಸದ, ಪ್ರೇಮ ಮತ್ತು ಕಾರುಣ್ಯದಿಂದ ತುಳುಕುವ ನದಿಯಂತೆ.

ಮಣಿಮೇಖಲೆಯು ಹಸಿದವರಿಗೆ ಅನ್ನ ನೀಡುತ್ತಿರುವುದನ್ನು ಕೇಳಿದ ರಾಜ ಸಂತೋಷಗೊಂಡು ಅವಳನ್ನು ಸತ್ಕರಿಸಲು ತನ್ನ ಅರಮನೆಗೆ ಕರೆಸಿಕೊಂಡ. ‘ನನ್ನಿಂದ ಏನಾಗಬೇಕೆಂದು ಹೇಳು. ನಿನಗಾಗಿ ವಿಹಾರವೊಂದನ್ನು ಕಟ್ಟಿಸಿಕೊಡುತ್ತೇನೆ. ನೀನು ನನ್ನ ರಾಜ್ಯದಲ್ಲಿಯೇ ಇದ್ದು ಹಸಿದವರಿಗೆ ಅನ್ನ ನೀಡುವ ಕಾರ್ಯವನ್ನು ಮುಂದುವರೆಸು’ ಎಂದು ಕೇಳಿಕೊಂಡ. ಅದಕ್ಕೆ ಮಣಿಮೇಖಲೆಯು ‘ರಾಜನೇ, ನಾನು ಮನೆಯಿಂದ ಮನೆಯಿಲ್ಲದಿರುವಿಕೆಯೆಡೆಗೆ ಸಾಗುತ್ತಿದ್ದೇನೆ. ನಾನು ಯಾವುದಕ್ಕೂ ಅಂಟಿಕೊಳ್ಳಲಾರೆ. ನೀನು ನನ್ನ ಮಾತನ್ನು ಪಾಲಿಸುವೆಯಾದರೆ, ನಿನ್ನ ಸೆರೆಮನೆಯಲ್ಲಿರುವವರನ್ನು ಬಿಡುಗಡೆಗೊಳಿಸು. ಸೆರೆಮನೆಯನ್ನು ಧರ್ಮಶಾಲೆಯನ್ನಾಗಿ ಮಾಡು. ಇನ್ನು ಮುಂದೆ ಅದು ದಯಾಗೃಹವಾಗಲಿ’ ಎಂದು ತಿಳಿಸಿದಳು. ಅದರಂತೆ ರಾಜನು ಎಲ್ಲ ಸೆರೆಯಾಳುಗಳನ್ನು ಬಿಡುಗಡೆಗೊಳಿಸಿ, ತೆರಿಗೆಗಳನ್ನು ರದ್ದುಗೊಳಿಸಿದನು. ಹಸಿದವರಿಗೆ ಅನ್ನ, ಉಡಲು ವಸ್ತ್ರ, ವಾಸಿಸಲು ಮನೆ ಕೊಡದ ರಾಜನು ಧರ್ಮಪಥದಿಂದ ಹೊರಗಿರುವನೆಂದೇ ಈ ಕಾವ್ಯ ಹೇಳುತ್ತದೆ.

ಮಣಿಮೇಖಲೆಯ ಪ್ರೇಮ ಒಬ್ಬರ ಅಥವಾ ಒಂದು ರಾಜ್ಯದ ಹಿತಕ್ಕಾಗಿ ಮಾತ್ರ ಇರಲಿಲ್ಲ. ಅದು ಸರ್ವಜನರ ಹಿತಕ್ಕಾಗಿ ಇತ್ತು. ಅವಳಲ್ಲಿ ಬೌದ್ಧ ದರ್ಶನದ ಸಮಗ್ರತೆ ಮತ್ತು ಲೋಕಕಾರುಣ್ಯದ ಗುಣಗಳು ಮೇಳೈಸಿದ್ದವು.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಮಹಾ ಕಾರ್ಯಗಳು ಮಹಾ ತ್ಯಾಗದಿಂದ ಮಾತ್ರ ಸಾಧ್ಯ.
  –ಸ್ವಾಮಿ ವಿವೇಕಾನಂದ
- ಜೀವನ ಎಂಬುದು ಸೈಕಲ್ ಸವಾರಿ ಇದ್ದಂತೆ. ಸಮತೋಲನಕ್ಕೆ ಚಲಿಸುತ್ತಲೇ ಇರಬೇಕು.
  –ಐನ್‌ಸ್ಟೀನ್
- ಬದುಕಿನಲ್ಲಿ ಕಷ್ಟ ಬರಲೇಬೇಕು. ಸಂಕಟಗಳು ಇದ್ದರೆ ಯಶಸ್ಸಿಗೆ, ಸಾಧನೆಗೆ ಸಂಭ್ರಮ.
  –ಎ.ಪಿ.ಜೆ. ಅಬ್ದುಲ್ ಕಲಾಂ
- ನಾವು ಪ್ರತಿಯೊಬ್ಬರೂ ಒಂಟಿಯಾಗಿ ನಮ್ಮ ಕಾಲಿನ ಮೇಲೆ ನಾವು ನಿಲ್ಲಬೇಕು. ನಮ್ಮ ಸಂಗಾತಿ ದೇವರು ಒಬ್ಬನೇ.
  –ಮಹಾತ್ಮ ಗಾಂಧಿ
- ಮಹಾತ್ಮರು ಸ್ವಶಕ್ತಿಯ ಬಲದಿಂದ ಕಾರ್ಯವನ್ನು ಸಾಧಿಸುತ್ತಾರೆಯೇ ಹೊರತು ಸಾಧನಗಳ ಬಲದಿಂದಲ್ಲ.
  –ಸುಭಾಷಿತ
- ಯಾವುದೇ ಒಂದು ಸಮಾಜದ ಬೆಳವಣಿಗೆಯನ್ನು ನಾನು ಆ ಸಮಾಜದ ಹೆಣ್ಣುಮಕ್ಕಳ ಸ್ಥಿತಿಗತಿಯ ಮೇಲೆ ನಿರ್ಧರಿಸುತ್ತೇನೆ.
  –ಅಂಬೇಡ್ಕರ್
- ಕಾಯಲು ಮೇಲೊಬ್ಬ ಇರುವಾಗ ಕಾಯಕವಿಲ್ಲದ ಕೊಂಕು ಮಾತಿಗೆ ಏಕೆ ಕೊರಗುತ್ತೀರಾ?
  –ಬಸವಣ್ಣ